ಒದಗಿಸುವುದು) (ವಿರಾಜಪೇಟೆ ತಾಲ್ಲೂಕಿನ ಮಂಡಲವಾರು ವಿವರಗಳನ್ನು ಒದಗಿಸುವುದು)

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಅ)

1988-89	860	ಮನೆಗಳು
1989-90	683	ಮನೆಗಳು
1990-91	382	ಮನೆಗಳು

ಆ) 382 ಮನೆಗಳು (1990-91 ರ ಗುರಿಯನ್ನು ವಿಲೀನಗೊಳಿಸಲಾಗಿದೆ)

ಇ) 2510 ಮನೆಗಳು

ಈ) ರೂ. 143.87 ಲಕ್ಷ

ಉ)

ಇಲ್ಲ

ಮಡಿಕೇರಿ	ರೂ. 51.72	ಲಕ್ಷ
ಸೋಮವಾರಪೇಟೆ	ರೂ. 62.00	ಲಕ್ಷ
ವಿರಾಜಪೇಟೆ	ರೂ. 30.15	ಲಕ್ಷ
ಒಟ್ಟು	**ರೂ. 143.87**	**ಲಕ್ಷ**

ಜನತಾ ವಸತಿ ಯೋಜನೆಯನ್ವಯ ಮನೆ ಕಟ್ಟಲು 1978-79 ರಿಂದಲೂ ಸಾಲ ಕೊಡುತ್ತಿದ್ದು, ಮಂಡಲ ಪಂಚಾಯತಿಗಳು 1987 ರಿಂದ ಮಾತ್ರ ಅಸ್ತಿತ್ವಕ್ಕೆ ಬಂದಿರುತ್ತದೆ. ಆದ್ದರಿಂದ ಮಂಡಲವಾರು ವಿವರಗಳು ಲಭ್ಯವಿರುವುದಿಲ್ಲ.

ಉಡುಪಿ ತಾಲ್ಲೂಕು 41ನೇ ಶೀರೂರು ಗ್ರಾಮಸ್ಥರಿಗೆ ರಸ್ತೆ ಸಂಪರ್ಕ ಕಲ್ಪಿಸುವ ಕುರಿತು

2357-ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕು 41ನೇ ಶೀರೂರು ಗ್ರಾಮದ 'ಕಾಪಾಡಿ' ಪರಿಸರದಲ್ಲಿ ರಸ್ತೆ ಸಂಪರ್ಕ ಇಲ್ಲದಿರುವುದು ನಿಜವಲ್ಲವೆ; ಹಾಗೂ ಈ ಪರಿಸರದ ವಿದ್ಯಾರ್ಥಿಗಳು, ಸಾರ್ವಜನಿಕರು ತುಂಬಾ ತೊಂದರೆ ಅನುಭವಿಸುವುದು ಸರ್ಕಾರಕ್ಕೆ ತಿಳಿದಿಲ್ಲವೆ?

ಆ) ಈ ಗ್ರಾಮಸ್ಥರು ಹತ್ತಿರದ ಹರಿಖಂಡಿಗೆಗೆ ಸುತ್ತು ಬಳಸಿ 2 ಮೈಲು ನಡೆದುಕೊಂಡು ಬರಬೇಕಾದ ಪರಿಸ್ಥಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ? (ಲೋಕೋಪಯೋಗಿ ಇಲಾಖೆಯ ಗಮನಕ್ಕೆ ಬಂದಿಲ್ಲವೆ)

ಇ) ಗ್ರಾಮಸ್ಥರು ಮೂಲಭೂತ ಅವಶ್ಯಕತೆಯಾದ ರಸ್ತೆ ಸಂಪರ್ಕವನ್ನು ಒದಗಿಸುವ ಸಲುವಾಗಿ ಸರ್ಕಾರ ಈವರೆಗೆ ಕೈಗೊಂಡ ಕ್ರಮವೇನು? (ಲೋಕೋಪಯೋಗಿ ಇಲಾಖೆಯವರು ಈವರೆಗೆ ಕೈಗೊಂಡ ಕ್ರಮಗಳೇನು ತಿಳಿಸಬಹುದು).

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು) :

ಅ) ಶೀರೂರು ಗ್ರಾಮದ ಸುಮಾರು 150 ಜನಸಂಖ್ಯೆ ಇರುವ ಕಾಪಾಡಿ ಪರಿಸರಕ್ಕೆ ಮುಖ್ಯ ಗ್ರಾಮಾಂತರ ರಸ್ತೆಯಿಂದ 4.00 ಕಿ.ಮೀ. ಉದ್ದದ ಒಂದು

ರಸ್ತೆ ಹರಿಖಂಡಿಗೆಯಿಂದ 3.00 ಕಿ.ಮೀ ಉದ್ದದ ಒಂದು ರಸ್ತೆ ಹೀಗೆ ಎರಡು ಕಚ್ಚಾ ರಸ್ತೆಗಳ ಸಂಪರ್ಕ ಇರುತ್ತದೆ. ಇವು ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಬರುತ್ತವೆ.

ಆ) ಹರಿಖಂಡಿಗೆ ಹತ್ತಿರದ ದಾರಿಯಾದ 3.00 ಕಿ.ಮೀ ಉದ್ದದ ಕಚ್ಚಾ ರಸ್ತೆಯಲ್ಲಿ 6.00 ಮೀಟರ್ ಅಗಲದ ಒಂದು ಹಳ್ಳ ಹರಿಯುತ್ತಿದ್ದು ಇದಕ್ಕೆ ಸೇತುವೆ ಇಲ್ಲದಿರುವುದರಿಂದ ಸಾರ್ವಜನಿಕರು ಹತ್ತಿರದ ದಾರಿಯನ್ನು ಬಿಟ್ಟು ಸುತ್ತು ಬಳಸಿದ 4.00 ಕಿ.ಮೀ ಉದ್ದದ ರಸ್ತೆಯನ್ನು ಉಪಯೋಗಿಸುತ್ತಿದ್ದಾರೆ.

ಇ) ಕಾಪಾಡಿ ಪರಿಸರಕ್ಕೆ ಹರಿಖಂಡಿಯಿಂದ 3 ಕಿ.ಮೀ ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಿ ಹಳ್ಳಕ್ಕೆ ಸೇತುವೆ ನಿರ್ಮಿಸಿ ಸರ್ವಋತು ರಸ್ತೆಯನ್ನಾಗಿ ಮಾಡುವುದಕ್ಕೆ 10.50 ಲಕ್ಷ ರೂ.ಗಳ ಅಂದಾಜು ಆಗುತ್ತದೆ. ಮಂಗಳೂರು ಜಿಲ್ಲಾ ಪರಿಷತ್ತಿನವರಿಗೆ ಈ ಕಾಮಗಾರಿಯ ಅವಶ್ಯಕತೆಯನ್ನು ಅವಲೋಕಿಸಿ ಸರ್ವಋತು ರಸ್ತೆ ನಿರ್ಮಿಸಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗುವುದು.

ಕಾವೇರಿ ಜಲಾನಯನ ಪ್ರದೇಶದಲ್ಲಿನ ಯೋಜನೆಗಳ ಕುರಿತು

2059 - ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಕಾವೇರಿ ಜಲಾನಯನ ಪ್ರದೇಶದ ವಿವಿಧ ಯೋಜನೆಗಳಿಗೆ ಕಳೆದ 3 ವರ್ಷಗಳಲ್ಲಿ ಬಜೆಟ್‌ನಲ್ಲಿ ಒದಗಿಸಲಾಗಿದ್ದ ಹಣವೆಷ್ಟು ಹಾಗೂ ಖರ್ಚಾದ ಹಣವೆಷ್ಟು? (ವಿವರ ನೀಡುವುದು)

ಆ) ಈ ಎಲ್ಲಾ ಯೋಜನೆಗಳನ್ನು ಪೂರ್ಣಗೊಳಿಸಲು ಬೇಕಾಗಿರುವ ಒಟ್ಟು ಹಣ ಎಷ್ಟು ಹಾಗೂ ಈ ಯೋಜನೆಗಳನ್ನು ಎಂದು ಪೂರ್ಣಗೊಳಿಸಲಾಗುವುದು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) ವರ್ಷ ಅನುದಾನಮಾಡಿದ ಖರ್ಚು (ಕೋಟಿ ರೂ.ಗಳಲ್ಲಿ)

1988-89	92.37	69.78
1989-90	119.86	91.95
1990-91	124.44	102.68

(ಯೋಜನಾವಾರು ಪಟ್ಟಿಯನ್ನು ಲಗತ್ತಿಸಲಾಗಿದೆ)

ಆ) ಇದಕ್ಕೆ ಬೇಕಾದ ಹಣ ಸುಮಾರು 1475 ಕೋಟಿ ರೂ.ಗಳಾಗಿರುತ್ತದೆ. (ಈ ವರ್ಷದ ಅನುದಾನ ರೂ.140.47 ಕೋಟಿಗಳ ಹೊರತಾಗಿ) ಆದಷ್ಟು ಶೀಘ್ರವಾಗಿ ಮುಗಿಸಲು ಕ್ರಮ ಕೈಗೊಳ್ಳಲಾಗುವುದು.